ಪಶುವೈದ್ಯ ಶಾಲೆಗಳನ್ನು ತೆರೆಯುವುದು

೮೭೯ (೨೪೩೦) ಶ್ರೀ ಆರ್ ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಸತಿ, ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ರಾಜ್ಯದಲ್ಲಿರುವ ಪಶುವೈದ್ಯ ಶಾಲೆ, ಗ್ರಾಮೀಣ ಪಶುವೈದ್ಯ ಶಾಲೆ, ಕೀ ವಿಲೇಜ್ ಕೇಂದ್ರ ಘಟಕ ಹಾಗೂ ಕುರಿ ಮತ್ತು ಉಣ್ಣೆ ಕೇಂದ್ರಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಮೇಲ್ದರ್ಜೆಗೇರಿಸಿರುವ ಮತ್ತು ಹೊಸದಾಗಿ ಪ್ರಾರಂಭಿಸಿರುವ ಪಶುವೈದ್ಯ ಶಾಲೆಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು.)

ಇ) ಸಾಲಿನಲ್ಲಿ ಪ್ರಾರಂಭ ಮಾಡಬೇಕೆಂದಿರುವ ಪಶುವೈದ್ಯ ಶಾಲೆಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆ ಹಾಗೂ ವಕ್ಫ್ ಸಚಿವರು).—

ಅ) ೧) ಪಶು ಆಸ್ಪತ್ರೆಗಳು ೩೩
೨) ಪಶುವೈದ್ಯ ಶಾಲೆಗಳು ೪೯ (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ. I ರಲ್ಲಿ ನೀಡಲಾಗಿದೆ)
೩) ಗ್ರಾಮೀಣ ಪಶುವೈದ್ಯ ಶಾಲೆಗಳು ೬೫೩
೪) ಪಶು ಚಿಕಿತ್ಸಾ ಕೇಂದ್ರಗಳು ೫೫
ಒಟ್ಟು ೧೨೩೬

೫) ಕೀ ವಿಲೇಜ್ ಕೇಂದ್ರ ಘಟಕಗಳು ೩೧ (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ.II ರಲ್ಲಿ ನೀಡಲಾಗಿದೆ.
ಉಪ ಕೇಂದ್ರಗಳು ೨೨೪
ಒಟ್ಟು ೨೫೫

೬) ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕೇಂದ್ರಗಳು. ೯ (ಜಿಲ್ಲಾ ಮತ್ತು ತಾಲೂಕುವಾರು ವಿವರಗಳನ್ನು ಅನುಬಂದ. III ರಲ್ಲಿ ನೀಡಲಾಗಿದೆ)
ವಿಸ್ತರಣಾ ಕೇಂದ್ರಗಳು ೭೩
ಒಟ್ಟು ೮೨

ಆ) ಕಳೆದ ಮೂರು ವರ್ಷಗಳಲ್ಲಿ ಯಾವುದೇ ಪಶುವೈದ್ಯ ಶಾಲೆಯನ್ನು ಮೇಲ್ದರ್ಜೆಗೇರಿಸಿರುವುದಿಲ್ಲ ಮತ್ತು ಹೊಸದಾಗಿ ಪಶುವೈದ್ಯ ಶಾಲಾಗಳನ್ನು ಪ್ರಾರಂಭಿಸಿರುವುದಿಲ್ಲ.

ಇ) ಜಿಲ್ಲಾ ಪರಿಷತ್ತುಗಳಿಂದ ಈವರೆವಿಗೆ ಬಂದಿರುವ ವರದಿಯಂತೆ ಪ್ರಸಕ್ತ ಸಾಲಿನಲ್ಲಿ ೭೩ ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವ ಹಾಗೂ ೨೦ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. (ಜಿಲ್ಲಾ ಮತ್ತು ತಾಲ್ಲೂಕು ವಿವರಗಳನ್ನು ಅನುಬಂಧ. ೪ರಲ್ಲಿ ನೀಡಲಾಗಿದೆ)

ಅನುಬಂಧ-೧

ರಾಜ್ಯದಲ್ಲಿರುವ ವಿವಿಧ ಪಶುವೈದ್ಯ ಶಾಲೆಗಳ ಸಂಖ್ಯೆ

ಕ್ರಮ ಸಂಖ್ಯೆ	ತಾಲ್ಲೂಕು	ಪಶು ಆಸ್ಪತ್ರೆಗಳು	ಪಶುವೈದ್ಯ ಶಾಲೆಗಳು	ಗ್ರಾಮೀಣ ಪಶುವೈದ್ಯ ಶಾಲೆಗಳು	ಪಶುವೈದ್ಯ ಕೀಯ ಚಿಕಿತ್ಸಾ ಕೇಂದ್ರಗಳು	ಒಟ್ಟು
೧	೨	೩	೪	೫	೬	೭
ಬೆಂಗಳೂರು ನಗರ ಜಿಲ್ಲೆ:						
೧.	ಬೆಂಗಳೂರು ಉತ್ತರ	೧	೭	೫	—	೧೩
೨.	ಬೆಂಗಳೂರು ದಕ್ಷಿಣ	೧	೯	೪	—	೧೪
೩.	ಆನೇಕಲ್	—	೬	೧	—	೭
	ಒಟ್ಟು	೨	೨೨	೧೦	—	೩೪
ಬೆಂಗಳೂರು ಗ್ರಾಮಾಂತರ ಜಿಲ್ಲೆ:						
೧.	ಹೊಸಕೋಟೆ	—	೫	೬	—	೧೧
೨.	ಚನ್ನಪಟ್ಟಣ	—	೧	೩	—	೪
೩.	ರಾಮನಗರ	—	೨	೨	—	೪
೪.	ದೇವನಹಳ್ಳಿ	—	೩	೨	—	೫
೫.	ನೆಲಮಂಗಲ	—	೩	೫	—	೮
೬.	ಕನಕಪುರ	—	೩	೨	—	೫
೭.	ಮಾಗಡಿ	—	೪	೬	—	೧೦
೮.	ದೊಡ್ಡಬಳ್ಳಾಪುರ	—	೩	೫	—	೮
	ಒಟ್ಟು	—	೨೪	೩೧	—	೫೫
ಚಿತ್ರದುರ್ಗ ಜಿಲ್ಲೆ:						
೧	ಚಿತ್ರದುರ್ಗ	೧	೪	೫	—	೧೦
೨.	ಜಗಳೂರು	—	೨	೬	—	೮
೩.	ಮೊಳಕಾಲ್ಮೂರು	—	೨	೪	—	೬
೪.	ಚಳ್ಳಕೆರೆ	—	೨	೭	—	೯
೫.	ಹೊಸದುರ್ಗ	—	೧	೮	—	೯
೬.	ಹಿರಿಯೂರು	—	೪	೪	—	೮
೭.	ಹೊಳಲ್ಕೆರೆ	—	೪	೪	—	೮
೮.	ಹರಿಹರ	—	೫	೩	—	೮
೯.	ದಾವಣಗೆರೆ	—	೭	೬	—	೧೩
	ಒಟ್ಟು	೧	೩೧	೪೭	—	೭೯

೧ ೨	೩	೪	೫	೬	೭
ಕೋಲಾರ ಜಿಲ್ಲೆ:					
೧. ಕೋಲಾರ	೧	೧	೫	—	೭
೨. ಮಾಲೂರು	—	೫	೩	—	೮
೩. ಬಂಗಾರಪೇಟೆ	೧	೧	೪	—	೬
೪. ಮುಳಬಾಗಿಲು	—	೩	೨	—	೫
೫. ಶ್ರೀನಿವಾಸಪುರ	—	೩	೪	—	೭
೬. ಚಿಂತಾಮಣಿ	—	೨	೫	—	೭
೭. ಶಿಡ್ಲಘಟ್ಟ	—	೨	೨	—	೪
೮. ಚಿಕ್ಕಬಳ್ಳಾಪುರ	—	೨	೩	—	೫
೯. ಗೌರಿಬಿದನೂರು	—	೩	೫	—	೮
೧೦. ಗುಡಿಬಂಡೆ	—	೩	—	—	೩
೧೧. ಬಾಗೇಪಲ್ಲಿ	—	೪	೧	—	೫
ಒಟ್ಟು	೨	೨೯	೩೪	—	೬೫
ಶಿವಮೊಗ್ಗ ಜಿಲ್ಲೆ:					
೧. ಶಿವಮೊಗ್ಗ	೧	೩	೫	—	೯
೨. ಭದ್ರಾವತಿ	—	೩	೨	—	೫
೩. ಸಾಗರ	೧	೨	೬	—	೯
೪. ಚನ್ನಗಿರಿ	—	೫	೪	—	೯
೫. ಹೊನ್ನಾಳ್ಳಿ	—	೩	೭	—	೧೦
೬. ಶಿಕಾರಿಪುರ	—	೪	೪	—	೮
೭. ಸೊರಬ	—	೩	೪	—	೭
೮. ಹೊಸನಗರ	—	೩	೪	—	೭
೯. ತೀರ್ಥಹಳ್ಳಿ	—	೨	೧೪	—	೧೬
ಒಟ್ಟು	೨	೨೮	೫೦	—	೮೦
ತುಮಕೂರು ಜಿಲ್ಲೆ:					
೧. ತುಮಕೂರು	೧	೩	೬	—	೧೦
೨. ಕೊರಟಗೆರೆ	—	೩	೬	—	೯
೩. ಮಧುಗಿರಿ	—	೪	೭	—	೧೧
೪. ಪಾವಗಡ	—	೨	೬	—	೮
೫. ಸಿರಾ	—	೫	೫	—	೧೦
೬. ತಿಪಟೂರು	—	೩	೧	—	೪
೭. ಚಿಕ್ಕನಾಯ್ಕನಹಳ್ಳಿ	—	೩	೪	—	೭
೮. ತುರುವೇಕೆರೆ	—	೫	೩	—	೮
೯. ಗುಬ್ಬಿ	—	೩	೧೦	—	೧೩
೧೦. ಕುಣಿಗಲ್	—	೫	೪	—	೯
ಒಟ್ಟು	೧	೩೬	೫೨	—	೮೯

೧	೨	೩	೪	೫	೬	೭
ಮೈಸೂರು ಜಿಲ್ಲೆ:						೨
೧.	ಮೈಸೂರು	೨	೨	೯	—	೩
೨.	ನಂಜನಗೂಡು	—	೪	೮	—	೧೨
೩.	ಚಾಮರಾಜನಗರ	—	೩	೫	—	೮
೪.	ಕೊಳ್ಳೇಗಾಲ	—	೧	೫	—	೬
೫.	ಟಿ. ನರಸೀಪುರ	—	೪	೧	—	೫
೬.	ಹುಣಸೂರು	—	೪	೬	—	೧೦
೭.	ಪಿರಿಯಾಪಟ್ಟಣ	—	೪	೪	—	೮
೮.	ಕೃಷ್ಣರಾಜನಗರ	—	೫	೪	—	೯
೯.	ಗುಂಡ್ಲುಪೇಟೆ	—	೨	೮	—	೧೦
೧೦.	ಹೆಗ್ಗಡದೇವನಕೋಟೆ	—	೨	೪	—	೬
೧೧.	ಯಳಂದೂರು	—	೧	೨	—	೩
	ಒಟ್ಟು	೨	೩೨	೫೬	—	೯೦
ಮಂಡ್ಯ ಜಿಲ್ಲೆ:						
೧.	ಮಂಡ್ಯ	೧	೬	೩	—	೧೦
೨.	ಮದ್ದೂರು	—	೫	೪	—	೯
೩.	ಕೆ. ಆರ್. ಪೇಟೆ	—	೫	೩	—	೮
೪.	ಪಾಂಡವಪುರ	—	೪	೨	—	೬
೫	ಮಳವಳ್ಳಿ	—	೩	೨	—	೫
೬.	ನಾಗಮಂಗಲ	—	೨	೨	—	೪
೭.	ಶ್ರೀರಂಗಪಟ್ಟಣ	—	೩	೧	—	೪
	ಒಟ್ಟು	೧	೨೮	೧೭	—	೪೬
ಹಾಸನ ಜಿಲ್ಲೆ:						
೧.	ಹಾಸನ	೧	೪	೩	—	೮
೨.	ಸಕಲೇಶಪುರ	೧	೧	೪	—	೬
೩.	ಅಲೂರು	—	೨	೪	—	೬
೪.	ಅರಕಲಗೂಡು	—	೪	೪	—	೮
೫.	ಅರಸೀಕೆರೆ	—	೪	೬	—	೧೦
೬.	ಚನ್ನರಾಯಪಟ್ಟಣ	—	೬	೬	೧	೧೩
೭.	ಹೊಳೆನರಸೀಪುರ	—	೨	೪	—	೬
೮	ಬೇಲೂರು	—	೨	೬	—	೮
	ಒಟ್ಟು	೨	೨೬	೩೮	೧	೬೭

೧	೨	೩	೪	೫	೬	೭
ಚಿಕ್ಕಮಗಳೂರು ಜಿಲ್ಲೆ:						
೧.	ಚಿಕ್ಕಮಗಳೂರು	೧	೧	೮	—	೧೦
೨.	ಕಡೂರು	...	೭	೧೦	—	೧೭
೩.	ಮೂಡಿಗೆರೆ	...	೪	೩	...	೭
೪.	ತರೀಕೆರೆ	...	೫	೬	—	೧೧
೫.	ನರಸಿಂಹರಾಜಪುರ	...	೨	೨	...	೪
೬.	ಶೃಂಗೇರಿ	...	೧	೧	...	೨
೭.	ಕೊಪ್ಪ	—	೩	೨	—	೪
	ಒಟ್ಟು	೧	೨೩	೩೧		೫೫
ದಕ್ಷಿಣ ಕನ್ನಡ ಜಿಲ್ಲೆ:						
೧.	ಮಂಗಳೂರು	೧	೪	೧	—	೬
೨.	ಬಂಟ್ವಾಳ	—	೨	೫	೧	೮
೩.	ಬೆಳ್ತಂಗಡಿ	—	೧	೩	—	೪
೪.	ಕುಂದಾಪುರ	—	೩	೬	—	೯
೫.	ಕಾರ್ಕಳ	...	೩	೪	೧	೮
೬.	ಪುತ್ತೂರು	೧	೨	೨	—	೫
೭.	ಸೂಳ್ಯ	—	೨	೩	—	೫
೮.	ಉಡುಪಿ	—	೬	೧೧	—	೧೭
	ಒಟ್ಟು	೨	೨೩	೩೫	೨	೬೨
ಕೊಡಗು ಜಿಲ್ಲೆ:						
೧.	ಮಡಿಕೇರಿ	೧	೧	೭	...	೯
೨.	ಸೋಮವಾರಪೇಟೆ	—	೫	೪	—	೯
೩.	ವೀರಾಜಪೇಟೆ	—	೬	೮	—	೧೪
	ಒಟ್ಟು	೧	೧೨	೧೯	—	೩೨
ಗುಲ್ಬರ್ಗಾ ಜಿಲ್ಲೆ:						
೧.	ಗುಲ್ಬರ್ಗ	೧	೧	೩	—	೫
೨.	ಜೇವರ್ಗಿ	—	೨	೨	—	೪
೩.	ಚಿತ್ತಾಪುರ	...	೩	೫	—	೮
೪.	ಆಲಂಡ	—	೧	೬	—	೭
೫.	ಶಾಹಪುರ	—	೧	೩	—	೪
೬.	ಶೋರಾಪುರ	—	೩	೪	—	೭
೭.	ಅಫ್ಜಲ್‌ಪುರ	...	೧	೬	—	೭

೧	೨	೩	೪	೫	೬	೭
೮.	ಸೇಡಂ		೨	೩	—	೫
೯.	ಚಿಂಚೋಳಿ	—	೨	೮	—	೧೦
೧೦.	ಯಾದ್ಗೀರ್	—	೬	೨	—	೮
	ಒಟ್ಟು	೧	೨೨	೪೨	—	೬೫
ಬಳ್ಳಾರಿ ಜಿಲ್ಲೆ :						
೧.	ಬಳ್ಳಾರಿ	೧	೩	೨	—	೬
೨.	ಹೊಸಪೇಟೆ	—	೨	—	—	೨
೩.	ಹಡಗಲಿ	—	೩	೩	—	೬
೪.	ಹಗರಿಬೊಮ್ಮನಹಳ್ಳಿ	—	೨	೪	—	೬
೫.	ಹರಪನಹಳ್ಳಿ	—	೨	೬	—	೯
೬.	ಕೂಡ್ಲಿಗಿ	—	೩	೫	—	೮
೭.	ಸಂಡೂರು	—	೩	೧	—	೪
೮.	ಸಿರಗುಪ್ಪ	—	೨	೧	—	೩
		೧	೨೦	೨೩	—	೪೪
ಬೀದರ್ ಜಿಲ್ಲೆ :						
೧.	ಬೀದರ್	೧	—	೨	—	೩
೨.	ಭಾಲ್ಕಿ	—	೨	೫	—	೭
೩.	ಹುಮ್ನಾಬಾದ್	—	೫	೨	—	೭
೪.	ಬಸವ ಕಲ್ಯಾಣ	—	೩	೩	—	೬
೫.	ಔರಾದ್	—	೩	೨	—	೫
		೧	೧೩	೧೪	—	೨೮
ರಾಯಚೂರು ಜಿಲ್ಲೆ :						
೧.	ರಾಯಚೂರು	೧	—	೨	—	೩
೨.	ಮಾನ್ವಿ	—	೨	೪	—	೬
೩.	ಸಿಂಧನೂರು	೧	—	೨	—	೩
೪.	ಗಂಗಾವತಿ	೧	೩	—	—	೪
೫.	ಕೊಪ್ಪಳ	೧	—	೫	—	೬
೬.	ಯಲಬುರ್ಗ	—	೩	೧	—	೪
೭.	ಕುಷ್ಟಗಿ	—	೨	೩	—	೫
೮.	ಲಿಂಗಸುಗೂರು	—	೨	೫	—	೭
೯.	ದಿಯೋದುರ್ಗ	—	೩	—	—	೩
		೪	೧೫	೨೨	—	೪೧

೧	೨	೩	೪	೫	೬	೭
ಬೆಳಗಾವಿ ಜಿಲ್ಲೆ :						
೧.	ಬೆಳಗಾವಿ	೧	೨	೩	—	೬
೨.	ಹುಕ್ಕೇರಿ	—	೨	—	೪	೬
೩.	ಚಿಕ್ಕೋಡಿ	—	೪	೩	—	೭
೪.	ಅಥಣಿ	—	೪	೫	೩	೧೨
೫.	ರಾಯಬಾಗ್	—	೧	೩	೧	೫
೬.	ಗೋಕಾಕ್	—	೩	೯	೨	೧೪
೭.	ರಾಮದುರ್ಗ	—	೨	೪	೨	೮
೮.	ಸವದತ್ತಿ	—	೪	೬	—	೧೦
೯.	ಬೈಲಹೊಂಗಲ	—	೪	೪	—	೮
೧೦.	ಖಾನಾಪುರ	—	೨	—	೨	೪
		೧	೨೮	೩೭	೧೪	೮೦
ಬಿಜಾಪುರ ಜಿಲ್ಲೆ :						
೧.	ಬಿಜಾಪುರ	೧	೨	೨	೬	೧೧
೨.	ಇಂಡಿ	—	೨	೨	೩	೭
೩.	ಸಿಂದಗಿ	—	೨	೩	೨	೭
೪.	ಬಸವನ ಬಾಗೇವಾಡಿ	—	೧	೭	—	೮
೫.	ಮುದ್ದೇಬಿಹಾಳ್	—	೪	—	—	೪
೬.	ಜಮಖಿಂಡಿ	—	೪	೧	—	೫
೭.	ಮುಧೋಳ್	—	೧	—	೨	೩
೮.	ಬೀಳಗಿ	—	೨	೧	—	೩
೯.	ಹುನುಗುಂದ	—	೫	೫	—	೧೦
೧೦.	ಬಾಗಲಕೋಟೆ	—	೧	೩	೨	೬
೧೧.	ಬಾದಾಮಿ	—	೩	೨	೨	೭
		೧	೨೭	೨೬	೧೭	೭೧
ಉತ್ತರ ಕನ್ನಡ ಜಿಲ್ಲೆ :						
೧.	ಕಾರವಾರ	೧	—	೧	—	೨
೨.	ಅಂಕೋಲ	—	೧	೧	೨	೪
೩.	ಹೊನ್ನಾವರ	—	೨	೩	—	೫
೪.	ಕುಮಟ	೧	೧	—	೨	೪
೫.	ಭಟ್ಕಳ	—	೨	೧	—	೩
೬.	ಸಿದ್ದಾಪುರ	—	೨	೩	೨	೭
೭.	ಸಿರ್ಸಿ	೧	೩	೩	—	೭
೮.	ಮುಂಡಗೋಡು	—	೧	೫	—	೬
೯.	ಯಲ್ಲಾಪುರ	—	೨	೭	—	೯
೧೦.	ಹಳಿಯಾಳ	—	೨	೨	—	೪
೧೧.	ಸೂಪಾ	—	೧	—	೧	೨
		೩	೧೭	೨೮	೭	೫೫

೧	೨	೩	೪	೫	೬	೭
ಧಾರವಾಡ ಜಿಲ್ಲೆ.—						
೧.	ಧಾರವಾಡ	೧	೧	೧	೨	೫
೨.	ಹುಬ್ಬಳ್ಳಿ	೧	೧	೨	—	೪
೩.	ಗದಗ್	೧	೨	೩	—	೬
೪.	ಹಾವೇರಿ	೧	೩	೨	—	೬
೫.	ಕಲಘಟಗಿ	—	೨	೧	೨	೫
೬.	ಶಿಗ್ಗಾವಿ	—	೨	೨	—	೪
೭.	ಹಾನಗಲ್	—	೨	೨	೨	೬
೮.	ಬ್ಯಾಡಗಿ	—	೨	೨	—	೪
೯.	ಹಿರೇಕೆರೂರು	—	೬	೨	—	೯
೧೦.	ರಾಣೇಬೆನ್ನೂರು	—	೩	೬	೧	೧೦
೧೧.	ಶಿರಹಟ್ಟಿ	—	೨	೨	೧	೫
೧೨.	ಮುಂಡರಗಿ	—	೧	೫	೧	೬
೧೩.	ನರಗುಂದ	—	೧	೨	೧	೪
೧೪.	ಸವಣೂರು	—	೧	೧	೧	೩
೧೫.	ನವಲಗುಂದ	—	೩	೩	—	೬
೧೬.	ಕೋಣ	—	೩	೩	೩	೯
೧೭.	ಕುಂದಗೋಳ	—	೩	೩	—	೬
		೪	೩೯	೪೩	೧೪	೧೦೦
	ರಾಜ್ಯದಲ್ಲಿರುವ ಒಟ್ಟು ಪಶುವೈದ್ಯ ಶಾಲೆಗಳು :	೩೩	೪೯೫	೬೫೩	೫೫	೧೨೩೬

ಅನುಬಂಧ-೨

ರಾಜ್ಯದಲ್ಲಿರುವ ಪ್ರಧಾನ ಗ್ರಾಮೀಣ ಯೋಜನೆಗಳ ವಿವರಗಳು

ಜಿಲ್ಲೆ		ತಾಲ್ಲೂಕು	ಪ್ರಧಾನ ಗ್ರಾಮೀಣ ಯೋಜನೆ ಮುಖ್ಯ ಕೇಂದ್ರಗಳ ಸಂಖ್ಯೆ	ಉಪಕೇಂದ್ರ ಗಳ ಸಂಖ್ಯೆ
೧	೨	೩	೪	೫
೧.	ಬೆಂಗಳೂರು ನಗರ	ಬೆಂಗಳೂರು ಉತ್ತರ	೧	೫
೨.	ಬೆಂಗಳೂರು ಗ್ರಾಮಾಂತರ	ಕನಕಪುರ	೧	೧೧
೩.	ಕೋಲಾರ	ಮುಳಬಾಗಿಲು	೧	೧೦
		ಚಿಂತಾಮಣಿ	೧	೧೦
೪.	ಚಿತ್ರದುರ್ಗ	ದಾವಣಗೆರೆ	೧	೧೦
೫.	ಶಿವಮೊಗ್ಗ	ಹೊನ್ನಾಳಿ	೧	೯
೬.	ತುಮಕೂರು	ಕುಣಿಗಲ್	೧	೧೦
೭.	ಹಾಸನ	ಚನ್ನರಾಯಪಟ್ಟಣ	೧	೮
೮.	ಮೈಸೂರು	ಕೊಳ್ಳೇಗಾಲ	೧	೭
		ಟಿ. ನರಸೀಪುರ	೧	೬
		ಹುಣಸೂರು	೧	೫
		ಚಾಮರಾಜನಗರ	೧	೫

೧	೨	೩	೪	೫
೯.	ದಕ್ಷಿಣ ಕನ್ನಡ	ಮಂಗಳೂರು	೧	೮
೧೦.	ಕೊಡಗು	ವಿರಾಜಪೇಟೆ	೨	೧೨
		ಸೋಮವಾರಪೇಟೆ	೧	೬
೧೧.	ಚಿಕ್ಕಮಗಳೂರು	ತರೀಕೆರೆ	೧	೫
೧೨.	ಮಂಡ್ಯ	ಮಳವಳ್ಳಿ	೧	೧೦
೧೩.	ಬೆಳಗಾವಿ	ಹುಕ್ಕೇರಿ	೧	೬
೧೪.	ಬಿಜಾಪುರ	ಬಿಜಾಪುರ	೧	೬
		ಜಮಖಂಡಿ	೧	೬
೧೫.	ಗುಲ್ಬರ್ಗ	ಗುಲ್ಬರ್ಗ	೧	೧೦
		ಆಲಂದ	೧	೧೦
೧೬.	ಬಳ್ಳಾರಿ	ಹರಪನಹಳ್ಳಿ	೧	೫
		ಹೊಸಪೇಟೆ	೧	೬
೧೭.	ಬೀದರ್	ಬೀದರ್	೧	೬
		ಹುಮ್ನಾಬಾದ್	೧	೫
೧೮.	ರಾಯಚೂರು	ಸಿಂಧನೂರು	೧	೫
೧೯.	ಧಾರವಾಡ	ಹಾವೇರಿ	೧	೬
		ಹಿರೇಕೆರೂರು	೧	೧೦
೨೦.	ಉತ್ತರಕನ್ನಡ	ಸಿರ್ಸಿ	೧	೬
		ಒಟ್ಟು :	೩೧	೨೨೪

ಅನುಬಂಧ-೩

ರಾಜ್ಯದಲ್ಲಿರುವ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳ ವಿವರಗಳು :

	ಜಿಲ್ಲೆ	ತಾಲ್ಲೂಕು	ಮುಖ್ಯ ಕೇಂದ್ರಗಳು	ವಿಸ್ತರಣಾ ಕೇಂದ್ರಗಳು
೧.	ಮಂಡ್ಯ	ಮಳವಳ್ಳಿ	೧	೮
		ನಾಗಮಂಗಲ	೧	೮
೨.	ಹಾಸನ	ಚನ್ನರಾಯಪಟ್ಟಣ	೧	೯
೩.	ಬಿಜಾಪುರ	ಬಿಜಾಪುರ	೧	೮
೪.	ಬಳ್ಳಾರಿ	ಹೊಸಪೇಟೆ	೧	೮
೫.	ಗುಲ್ಬರ್ಗ	ಯಾದಗೀರ್	೧	೮
೬.	ಚಿತ್ರದುರ್ಗ	ಹೊಸದುರ್ಗ	೧	೮
೭.	ಕೋಲಾರ	ಕೋಲಾರ	೧	೮
೮.	ಧಾರವಾಡ	ರಾಣೆಬೆನ್ನೂರು	೧	೮
		ಒಟ್ಟು	೯	೭೩

ಮೇಲ್ಕಂಡ ೯ ಯೋಜನೆಗಳ ಪೈಕಿ ಕೋಲಾರ ಮತ್ತು ಧಾರವಾಡ ಜಿಲ್ಲೆಗಳಲ್ಲಿರುವ ಒಟ್ಟು ಎರಡು ಯೋಜನೆಗಳು ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿದೆ.

ಅನುಬಂಧ–೪

ಈವರೆಗೆ ಬಂದಿರುವ ವರದಿಯಂತೆ ೧೯೮೫–೮೬ನೇ ಸಾಲಿನಲ್ಲಿ ಜಿಲ್ಲಾ ಪರಿಷತ್‌ಗಳ ಯೋಜನೆಯ ಅಡಿಯಲ್ಲಿ ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಬೇಕೆಂದಿರುವ ಹಾಗೂ ಮೇಲ್ದರ್ಜೆಗೇರಿಸಬೇಕೆಂದಿರುವ ಗ್ರಾಮಾಂತರ ಪಶುವೈದ್ಯ ಶಾಲೆಗಳ ವಿವರ.

ಜಿಲ್ಲೆ	ತಾಲ್ಲೂಕು	ಹೊಸದಾಗಿ ಪ್ರಾರಂಭಿಸಬೇಕೆಂದಿರುವ ಗ್ರಾಮಾಂತರ ಪಶುವೈದ್ಯ ಶಾಲೆಗಳ ಸಂಖ್ಯೆ	ಮೇಲ್ದರ್ಜೆಗೇರಿಸಬೇಕೆಂದಿರುವ ಗ್ರಾಮಾಂತರ ಪಶುವೈದ್ಯ ಶಾಲೆಗಳ ಸಂಖ್ಯೆ
೧	೨	೩	೪
೧. ಮೈಸೂರು	ಕೆ.ಆರ್. ನಗರ	೦	—
	ಪಿರಿಯಾಪಟ್ಟಣ	೦	—
	ಹುಣಸೂರು	೦	—
	ಮೈಸೂರು	೦	೦
	ಟಿ. ನರಸೀಪುರ	೦	—
	ನಂಜನಗೂಡು	೦	—
	ಗುಂಡ್ಲುಪೇಟೆ	೦	೦
	ಹೆಚ್.ಡಿ. ಕೋಟೆ	೦	—
	ಕೊಳ್ಳೇಗಾಲ	೦	೦
	ಚಾಮರಾಜನಗರ	೦	—
	ಒಟ್ಟು	೧೦	೩
೨. ಉತ್ತರ ಕನ್ನಡ	ಸೂಪಾ	೦	—
	ಒಟ್ಟು	೦	—
೩. ರಾಯಚೂರು	ರಾಯಚೂರು	೩	೦
	ದೇವದುರ್ಗ	೩	—
	ಸಿಂಧನೂರು	೨	೦
	ಮಾನ್ವಿ	೨	೦
	ಲಿಂಗಸುಗೂರು	೦	೦
	ಕುಷ್ಟಗಿ	೦	೦
	ಕೊಪ್ಪಳ	೦	೦
	ಗಂಗಾವತಿ	೨	—
	ಯಲಬುರ್ಗ	೦	೦
	ಒಟ್ಟು	೧೬	೨
೪. ಬೀದರ್	ಬಸವಕಲ್ಯಾಣ	೦	—
	ಹುಮ್ನಾಬಾದ್	೦	—
	ಔರಾದ್	೨	—
	ಭಾಲ್ಕಿ	೩	—
	ಒಟ್ಟು	೭	—

೧	೨	೩	೪
೫. ಧಾರವಾಡ	ಗದಗ	೧	—
	ರಾಣಿಬೆನ್ನೂರು	೧	—
	ಹಾವೇರಿ	೧	—
	ಬ್ಯಾಡಗಿ	೧	—
	ಹಾನಗಲ್ಲ	೧	—
	ಸವಣೂರು	೧	—
	ಶಿರಹಟ್ಟಿ	೧	—
	ಹುಬ್ಬಳ್ಳಿ	೧	—
	ರೋಣ	೨	—
	ನವಲಗುಂದ	೧	—
	ನರಗುಂದ	೧	—
	ಮುಂಡರಗಿ	೧	—
	ಒಟ್ಟು	೧೩	—
೬. ಗುಲ್ಬರ್ಗ	ಚಿತ್ತಾಪುರ	೩	೧
	ಶಹಾಪುರ	೩	೨
	ಆಲಂದ	೧	೧
	ಗುಲ್ಬರ್ಗ	೧	೧
	ಅಫಜಲ್‌ಪುರ	೨	೧
	ಸೇಡಂ	೨	೧
	ಜೇವರ್ಗಿ	೨	೧
	ಯಾದಗೀರ್	೨	—
	ಚಿಂಚೋಳಿ	೨	೧
	ಶೋರಾಪುರ	೨	೧
	ಒಟ್ಟು	೨೦	೧೦
೭. ಶಿವಮೊಗ್ಗ	(ವಿವರಗಳು ಬಂದಿಲ್ಲ)	೬	—
	ರಾಜ್ಯದಲ್ಲಿ ಒಟ್ಟು	೭೩	೨೦

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈಗ ಎಲ್ಲಾ ಕಡೆ ಮಿಲ್ಕ್ ಸೊಸೈಟಿಗಳು ಜಾಸ್ತಿ ಆಗುತ್ತಿವೆ. ರೈತರು ಬಹಳ ಬೆಲೆ ಬಾಳುವ ಹಸುಗಳನ್ನು ಹೊಂದಿದ್ದಾರೆ. ಹಸುಗಳನ್ನು ಕೊಂಡುಕೊಳ್ಳುವುದಕ್ಕೆ ಬ್ಯಾಂಕುಗಳಿಂದ ಸಾಲ ಮಾಡಿದರೆ ಮಾತ್ರ ಇನ್ಸೂರೆನ್ಸ್ ಸೌಲಭ್ಯವನ್ನು ಕೊಡಲಾಗುತ್ತದೆ. ಇಲ್ಲದಿದ್ದರೆ ಇಲ್ಲ. ಪಶುವೈದ್ಯ ಶಾಲೆಗಳನ್ನು ಕಳೆದ ಮೂರು ವರ್ಷಗಳಿಂದ ಹೊಸದಾಗಿ ಪ್ರಾರಂಭಿಸಿಲ್ಲವೆಂದು ಮಾನ್ಯ ಸಚಿವರೇ ಹೇಳಿದ್ದಾರೆ. ಈಗಲಾದರೂ ಇತ್ತಕಡೆ ಗಮನಿಸಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುತ್ತೀರಾ ? ಪಶುವೈದ್ಯ ಶಾಲೆಗಳ ಬಗ್ಗೆ ಜಿಲ್ಲಾ ಪರಿಷತ್ತುಗಳನ್ನು ಕೇಳಿದರೆ, ಸರ್ಕಾರದಿಂದ ದುಡ್ಡು ತೆಗೆದುಕೊಂಡು ಬನ್ನಿ ನಾವು ತೆಗೆಯುತ್ತೇವೆಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತುಗಳಿಗೆ ನೀವು ಸರಿಯಾಗಿ ಹಣವನ್ನು ಬಿಡುಗಡೆ ಮಾಡುವುದಿಲ್ಲ. ದಯವಿಟ್ಟು ಈ ಹೆಚ್ಚು ಕಡಿಮೆಯನ್ನು ಸರಿಪಡಿಸಿ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಮಹಮದ್ ಮೊಯಿನುದ್ದೀನ್.—ಸ್ವಾಮಿ, ಮಾನ್ಯ ಸದಸ್ಯರು ಹೇಳಿರುವುದು ಸರಿ. ಡೈರಿಗಳು ಜಾಸ್ತಿ ಆಗುತ್ತಿವೆ. ಆದೇ ರೀತಿ ಅನಿಮಲ್ ಹಸ್ಬೆಂಡರಿ ಆಸ್ಪತ್ರೆಗಳು ಜಾಸ್ತಿ ಆಗಬೇಕೆಂದು

ಹೇಳಿದ್ದಾರೆ. ಈಗಿರುವ ರೀತಿಯಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯುವ ಅಧಿಕಾರ ಪೂರ್ಣವಾಗಿ ಜಿಲ್ಲಾ ಪರಿಷತ್ತುಗಳ ವ್ಯಾಪ್ತಿಯಲ್ಲಿ ಬರುವ ಕಾರಣ ನಾವು ಯಾವ ರೀತಿಯಿಂದಲೂ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭ ಮಾಡಬೇಕಾದರೆ ಅದನ್ನು

೨–೩೦ ಪಿ. ಎಂ.

ಜಿಲ್ಲಾಪರಿಷತ್ತಿನವರೇ ಮಾಡಬೇಕು. ಇದರ ಪ್ರಕಾರ ಈಗಾಗಲೇ ೭ ಜಿಲ್ಲಾ ಪರಿಷತ್ತುಗಳಲ್ಲಿ ಹೊಸ ಡಿಸ್ಪೆನ್ಸರಿಗಳನ್ನು ಪ್ರಾರಂಭ ಮಾಡಲು ಮತ್ತು ಅಪ್‌ಗ್ರೇಡ್ ಮಾಡಲು ಅವರ ಡಿಸ್ಟ್ರಿಕ್ಟ್ ಪ್ಲಾನ್‌ನಲ್ಲಿ ಹಣವನ್ನು ಪ್ರೊವೈಡ್ ಮಾಡಿಕೊಂಡಿದ್ದಾರೆ. ಮತ್ತು ಮಾನ್ಯ ಸದಸ್ಯರು ಇತ್ತೀಚೆಗೆ ಹಸುಗಳ ಸಂಖ್ಯೆ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಈ ದಿಸೆಯಲ್ಲಿ ಕೆ.ಎಂ.ಎಫ್. ನವರು ಸಹ ವೆಟರ್ನರಿ ಸ್ವೀಡನ್ ಸರ್ವಿಸ್ ಅನ್ನು ರೈತರಿಗೆ ಕೊಡುತ್ತಾ ಇದ್ದಾರೆ.

ಶ್ರೀ ರಮೇಶ್‌ಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಇದೇ ಸದನದಲ್ಲಿ ಅನೇಕ ಬಾರಿ ಬಂದಿದೆ. —ಜಿಲ್ಲಾ ಪರಿಷತ್ತುಗಳಿಗೆ ಜವಾಬ್ದಾರಿಯನ್ನು ವಹಿಸಿದ ಮೇಲೆ ಅವರು ಮಾಡುತ್ತಾರೆ ಎಂದರೆ ಮಾಮೂಲಾಗಿ ಬರತಕ್ಕಂಥ ಸ್ವಲ್ಪ ಹಣವನ್ನು ಜಿಲ್ಲಾಪರಿಷತ್ತಿಗೆ ಸ್ವಲ್ಪ ವರ್ಗಾವಣೆ ಮಾಡಿ ಎಂದು ಹೇಳಿದ್ದೇನೆ. ಈಗ ಕಳೆದ ಎಂಟು ವರ್ಷಗಳಿಂದ ಹೊಸದಾಗಿ ಅವರು ಆರ್‌ವಿಡಿಸ್‌ಗಳನ್ನು ಮಾಡುವುದಾಗಲಿ, ಅಥವಾ ಇರತಕ್ಕಂಥ ಆರ್‌ವಿಡಿಎಸ್‌ಗಳನ್ನು ಅಪ್‌ಗ್ರೇಡ್ ಮಾಡತಕ್ಕಂಥಾದ್ದನ್ನಾಗಲೀ ಇವರು ಮಾಡಲಿಲ್ಲ. ಮಿಲ್ಕ್‌ರೂಟ್‌ಸಲ್ಲಿ ಮೊಬೈಲ್ ವ್ಯಾನ್ ಬರುತ್ತದೆ ಅವರ ಕೆಲಸವನ್ನು ಅವರು ಮಾಡಿಕೊಂಡು ಹೋಗುತ್ತಾರೆ. ಆದರೆ ಇವೊತ್ತಿನ ದಿವಸ ರೈತರು ತನ್ನ ಎಲ್ಲಾ ಬದುಕನ್ನು ಅದನ್ನೇ ಅವಲಂಬಿಸಿಕೊಂಡು ನಡೆಸುತ್ತಾ ಇದ್ದಾನೆ. ಇವರು ಯಾವುದಾದರೂ ಒಂದು ರೀತಿಯಲ್ಲಿ they must find some way to allocate more funds to Zilla Parishads. ಜಿಲ್ಲಾಪರಿಷತ್ತಿಗೆ ಇವರು ಕೊಟ್ಟಿರುವ ಹಣವು ಆಲ್ಲಿಯವರ ಸಂಬಳ ಸಾರಿಗೆಗೆ ಸಾಕಾಗುತ್ತದೆ. ಜಿಲ್ಲಾಪರಿಷತ್ತಿನವರು ಈ ಕೆಲಸಗಳನ್ನು ಮಾಡಿಕೊಳ್ಳಲಿ ಎಂದು ಇವರು ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಮಹತ್ವವಾದಂಥ ವಿಷಯವಾದುದರಿಂದ You must find some way to allocate more money to Zilla parishads and see that a provision is made for opening rural veterinary dispensaries.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಸಭಾಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಮತ್ತು ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ೩ಲಕ್ಷ ೨೫ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ರಮೇಶ್‌ಕುಮಾರ್.—ನೀವು ಕೊಟ್ಟ ಇಷ್ಟು ಹಣದಲ್ಲಿ ಏನು ಮಾಡುವುದಕ್ಕೆ ಆಗುತ್ತದೆ ? ಕಳೆದ ಐದಾರು ವರ್ಷಗಳಲ್ಲಿ ಎಷ್ಟು ಹಸುಗಳು ಜಾಸ್ತಿಯಾಗಿವೆ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಮಾನ್ಯ ಸದಸ್ಯರು ಹೇಳುತ್ತಾ ಇರುವುದು ಸರಿ. ಈಗ ರಿಲೀಸ್ ಮಾಡಿದ ಹಣ ಬರೀ ಸಂಬಳಸಾರಿಗೆಗೆ ಸಾಕಾಗಬಹುದು. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿಯು ಸರಿಹೋದರೆ ಜಾಸ್ತಿ ಫಂಡ್ಸ್‌ನ್ನು ಅಲಾಟ್ ಮಾಡುವುದಕ್ಕೆ ಸಾಧ್ಯವಾಗಬಹುದು. ಈ ಪ್ರಶ್ನೆಯು ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟಿರುವುದರಿಂದ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಕೋಲಾರ ಜಿಲ್ಲೆಗೆ ಈ ವರ್ಷವೇ ಸ್ವಲ್ಪ ಜಾಸ್ತಿ ಹಣ ರಿಲೀಸ್ ಮಾಡುವುದಕ್ಕೆ ಒಪ್ಪಿಕೊಳ್ಳುತ್ತೀರಾ ? ಆದೇ ರೀತಿಯಿಂದ ಬೇರೆ ಜಿಲ್ಲೆಗಳಿಗೂ ಕೂಡ ಜಾಸ್ತಿ ಮಾಡುವುದಕ್ಕೆ ಒಪ್ಪಿಕೊಳ್ಳಬೇಕು. ನೀವು ಕೊಡುವ ೩ಲಕ್ಷ ರೂ.ಗಳಿಂದ

೨–೩ ಸೆಂಟರ್‌ಗಳನ್ನು ಕೂಡ ಅಪ್‌ಗ್ರೇಡ್ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ಸ್ಪಷ್ಟವಾದ ಆಶ್ವಾಸನೆಯನ್ನು ಕೊಟ್ಟು ಜಿಲ್ಲಾಪರಿಷತ್ತುಗಳಿಗೆ ಜಾಸ್ತಿ ಫಂಡ್ಸ್ ರಿಲೀಸ್ ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಆ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಅಧ್ಯಕ್ಷರೆ, ೧೯೮೮-೮೯ನೇ ಸಾಲಿನಲ್ಲಿ ೭ ಜಿಲ್ಲೆಗಳಿಗೆ ೭೩ ಕೇಂದ್ರಗಳನ್ನು ಕೊಟ್ಟಿದ್ದೀರಿ. ಈ ಏಳು ಜಿಲ್ಲೆಗಳಿಗೆ ಬೇಗನೆ ಅನುದಾನವನ್ನು ಕೊಟ್ಟು ಪ್ರಾರಂಭ ಮಾಡುತ್ತೀರಾ ಹೇಗೆ ? ಅಂದರೆ ಈ ಬಗ್ಗೆ ಆದಷ್ಟು ಜಾಗ್ರತೆ ಕಾರ್ಯಗತ ಆಗುವ ಹಾಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಏಳು ಜಿಲ್ಲೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಬೇಕು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಏಳು ಜಿಲ್ಲಾಪರಿಷತ್ತುಗಳು ಅವರ ಡಿಫ್ಟಕ್ಟ್ ಪ್ಲಾನ್ ನಲ್ಲಿ ಈ ಡಿಸ್ಪೆನ್ಸರಿಗಳನ್ನು ಅಪ್‌ಗ್ರೇಡ್‌ಮಾಡಲು ಪ್ರೊಪೋಸಲ್ಸ್‌ನ್ನು ಕಳುಹಿಸಲಾಗಿದೆ. For starting Veterinary Dispensaries, ಮೈಸೂರು ಜಿಲ್ಲೆಗೆ ೪ ಲಕ್ಷ ರೂ. ಗಳನ್ನು ಕೊಡಲಾಗಿದೆ. ಇವರ ಪ್ರೊಪೋಸಲ್ ಇರುವುದು ಆರ್‌ವಿಡಿಎಸ್ ಮಾಡಬೇಕೆಂದು. ಉತ್ತರ ಕನ್ನಡ ಜಿಲ್ಲೆಗೆ ೧ ಲಕ್ಷ ೧೦ ಸಾವಿರ ಕೊಡಲಾಗಿದ್ದು ಅವರ ಪ್ರೊಪೋಸಲ್ ಕೊಟ್ಟಿರುವುದು Proposal for one RVDS, no upgrading. ಅಪ್‌ಗ್ರೇಡ್ ಯಾವುದನ್ನೂ ಮಾಡಿಲ್ಲ. ರಾಯಚೂರು ಜಿಲ್ಲೆಗೆ ಹನ್ನೊಂದೂವರೆ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಆ ಬಗ್ಗೆ ೧೬ಆರ್‌ವಿಡಿಎಸ್ ಪ್ರೊಪೋಸ್ ಮಾಡಿದ್ದಾರೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ತಾವುಗಳು ಜಿಲ್ಲಾವಾರು ಮಾಹಿತಿಗಳನ್ನು ಹೇಳುತ್ತಾ ಇದ್ದೀರಿ. ಮೈಸೂರು, ಉತ್ತರ ಕನ್ನಡ, ರಾಯಚೂರು ಮುಂತಾಗಿ ಜಿಲ್ಲೆಗಳಿಗೆ ಎಷ್ಟೆಷ್ಟು ಅನುದಾನವನ್ನು ಇಟ್ಟಿದ್ದೀರಿ ಎಂದು ಹೇಳಬೇಕು. ತಾವು ಹೇಳುತ್ತಾ ಇರುವುದನ್ನು ಮುಂದುವರಿಸಿ ಹೇಳಿ. ರಾಯಚೂರು, ಬೀದರ್, ಧಾರವಾಡ, ಗುಲ್ಬರ್ಗ ಜಿಲ್ಲೆಗಳಿಗೆ ಜಿಲ್ಲಾವಾರು ಅನುದಾನ ಎಷ್ಟು ಕೊಡುತ್ತೀರಿ ಎಂದು ಹೇಳಬೇಕು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ ಎಂದು ಹೇಳುವುದಾದರೆ ಬೆಂಗಳೂರು ಜಿಲ್ಲೆಗೆ ೫ ಲಕ್ಷ ೬೪ ಸಾವಿರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ೬೨ ಸಾವಿರ, ಚಿತ್ರದುರ್ಗಕ್ಕೆ ೩ ಲಕ್ಷ ೪೨ ಸಾವಿರ, ಕೋಲಾರಕ್ಕೆ ೩ ಲಕ್ಷ ೨೫ ಸಾವಿರ, ಶಿವಮೊಗ್ಗಕ್ಕೆ ೨ಲಕ್ಷ ೫೬ ಸಾವಿರ, ತುಮಕೂರು ಜಿಲ್ಲೆಗೆ ೨,೦೯ ಲಕ್ಷ ಮೈಸೂರಿಗೆ ೫ ಲಕ್ಷ ಚಿಕ್ಕಮಗಳೂರಿಗೆ ೬೪ ಸಾವಿರ, ಹಾಸನಕ್ಕೆ ೨೫ ಸಾವಿರ, ಮಂಡ್ಯಕ್ಕೆ ೧೫ ಸಾವಿರ, ಬೆಳಗಾಮ್‌ಗೆ ೬೦ ಸಾವಿರ, ಧಾರವಾಡಕ್ಕೆ ೧೧ ಲಕ್ಷ ಉತ್ತರ ಕನ್ನಡ ಜಿಲ್ಲೆಗೆ ೧ ಲಕ್ಷ ೧೦ ಸಾವಿರ, ಗುಲ್ಬರ್ಗ ಜಿಲ್ಲೆಗೆ ೧ ಲಕ್ಷ ೯೪ ಸಾವಿರ, ಬೀದರ್‌ಗೆ ೫ ಲಕ್ಷ ೨೦ ಸಾವಿರ ಹೀಗೆ — ಒಟ್ಟು ೬೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳು

೮೮೦ (೨೩೧೨) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಸತಿ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಗ್ರಾಮೀಣ ಪಶುವೈದ್ಯಾಲಯಗಳ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಎಷ್ಟು ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಕೊಂಡ ಕ್ರಮಗಳೇನು?

ಇ) ಈ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳೆಷ್ಟು?

ಈ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ೫೬ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಆ) ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಪರಿಷತ್‌ನವರೇ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ